## ಕರ್ನಾಟಕ ಸರ್ಕಾರ

ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆರೋಗ್ಯ ಸೌಧ,
5ನೇ ಮಹಡಿ, 1ನೇ ಅಡ್ಡರಸ್ತೆ (ಕುಷ್ಠರೋಗಆಸ್ಪತ್ರೆಆವರಣ) ಮಾಗಡಿರಸ್ತೆ, ಬೆಂಗಳೂರು-23.

ಸಂಖ್ಯೆ: ಜಿಆರ್‌ಓ(5)01/2017-18

ದಿನಾಂಕ: 27-06-2022

## ಸುತ್ತೋಲೆ

ವಿಷಯ ಜಿಲ್ಲಾ ಆಸ್ಪತ್ರೆಗಳಲ್ಲಿನ ದಂತ ಆರೋಗ್ಯಾಧಿಕಾರಿ ಹುದ್ದೆಗಳಿಗೆ ಎಂಡಿಎಸ್ ಪದವಿ ಹೊಂದಿರುವ ಹಿರಿಯ ದಂತ ಆರೋಗ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ
1) ಸರ್ಕಾರದ ಆದೇಶ ಸಂಖ್ಯೆ: ಆಕುಕ 42 ಹೆಚ್‌ಎಸ್‌ಡಿ 2016 ದಿನಾಂಕ: 25.05.2016 ಮತ್ತು 18.07.2016
2) ಸರ್ಕಾರದ ಪತ್ರ ಸಂಖ್ಯೆ:ಆಕುಕ 721 ಹೆಚ್‌ಎಸ್‌ಹೆಚ್ 2021 ದಿನಾಂಕ:20.11.2021
3) ಮಾನ್ಯ ಕೆ.ಎ.ಟಿ. ಆದೇಶ ಸಂಖ್ಯೆ:789 ರಿಂದ 809/2019 ದಿ:07.02.2020
4) ಮಾನ್ಯ ಕೆ.ಎ.ಟಿ. ಆದೇಶ ಸಂಖ್ಯೆ:6948/2020 ದಿ:12.01.2021

*******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಮಂಜೂರಾಗಿರುವ ಎರಡೂ ದಂತ ಆರೋಗ್ಯಾಧಿಕಾರಿ ಹುದ್ದೆಗಳಿಗೆ ಎಂಡಿಎಸ್ ಸ್ನಾತಕೋತ್ತರ ಪದವಿ ಪಡೆದ ಹಿರಿಯ ದಂತ ಆರೋಗ್ಯಾಧಿಕಾರಿಗಳನ್ನು ಜೇಷ್ಠತೆ ಆಧಾರದಲ್ಲಿ ಸ್ಥಳನಿಯುಕ್ತಿಗೊಳಿಸುವಂತೆ ಆದೇಶಿಸಿ ಉಲ್ಲೇಖಿತ ಸರ್ಕಾರಿ ಅಧಿಸೂಚನೆ ದಿನಾಂಕ:18.07.2016 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಮಾನ್ಯ ಕೆ.ಎ.ಟಿ ಆದೇಶ ಸಂಖ್ಯೆ:789 ರಿಂದ 809/2019 ದಿನಾಂಕ:07.02.2020 ರಲ್ಲಿ ಎಂಡಿಎಸ್ ವಿದ್ಯಾರ್ಹತೆ ಹೊಂದಿರುವವರನ್ನು ಆಯಾ ಜಿಲ್ಲಾ ಆಸ್ಪತ್ರೆಗೆ ಹಿರಿಯ ದಂತ ಆರೋಗ್ಯಾಧಿಕಾರಿಗಳಾಗಿ ಎಂಡಿಎಸ್ ಸ್ನಾತಕೋತ್ತರ ಪದವಿ ಹೊಂದಿದವರನ್ನು ಪರಿಗಣನೆಗೆ ತೆಗೆದುಕೊಂಡು ಜಿಲ್ಲಾ ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಹಿರಿಯ ದಂತ ಆರೋಗ್ಯಾಧಿಕಾರಿಗಳನ್ನು ಜೇಷ್ಠತೆ ಆಧಾರದಲ್ಲಿ ಸ್ಥಳ ನಿಯುಕ್ತಿಗೊಳಿಸಲು ಆದೇಶಿಸಿರುತ್ತಾರೆ.

ಮಾನ್ಯ ಕೆ.ಎ.ಟಿ. ಅರ್ಜಿ ಸಂಖ್ಯೆ:5006/2021 ದಾಖಲಿಸಿರುವ ಮಾನ್ಯ ನ್ಯಾಯಾಲಯವು ದಿನಾಂಕ:22.12.2022 ಆದೇಶದಲ್ಲಿ 3 ತಿಂಗಳೊಳಗಾಗಿ ಸರ್ಕಾರಿ ಆದೇಶವನ್ನು ಅನುಷ್ಠಾನಗೊಳಿಸುವಂತೆ ನಿರ್ದೇಶಿಸಿದೆ.

ಅದರಂತೆ, ಜಿಲ್ಲಾ/ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ (ಬಿಡಿಎಸ್ ವೈದ್ಯರು ಮತ್ತು ಎಂಡಿಎಸ್ ಪದವಿ ಹೊಂದಿರುವ ಕಿರಿಯ ದಂತ ಆರೋಗ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳನ್ನು ಖಾಲಿ ಎಂದು ಪರಿಗಣಿಸಿದೆ) ಖಾಲಿ ಇರುವ ದಂತ ಆರೋಗ್ಯಾಧಿಕಾರಿ ಹುದ್ದೆಗಳ ಪಟ್ಟಿಯನ್ನು ಅನುಬಂಧ-1 ರಲ್ಲಿರಿಸಿದೆ.

ಸದರಿ ಹುದ್ದೆಗಳನ್ನು ಎಂಡಿಎಸ್ ಪದವಿ ಹೊಂದಿರುವಂತಹ ಹಿರಿಯ ದಂತ ಆರೋಗ್ಯಾಧಿಕಾರಿಗಳನ್ನು ಸಮಾಲೋಚನೆ ಮೂಲಕ ಭರ್ತಿ ಮಾಡಲು ಉದ್ದೇಶಿಸಿದ್ದು, ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂಡಿಎಸ್ ಸ್ನಾತಕೋತ್ತರ ಪದವಿ ಹೊಂದಿರುವ ಹಿರಿಯ ದಂತ ಆರೋಗ್ಯಾಧಿಕಾರಿಗಳು ಸದರಿ ಖಾಲಿ ಹುದ್ದೆಗಳಿಗೆ ವರ್ಗಾವಣೆ ಬಯಸಿದ್ದಲ್ಲಿ, ಅನುಬಂಧ-2ರ ನಮೂನೆಯನ್ನು ಭರ್ತಿ ಮಾಡಿ ಮೇಲಾಧಿಕಾರಿಗಳ ಮೇಲು ಸಹಿಯೊಂದಿಗೆ ದಿನಾಂಕ: 30.6.2022 ರೊಳಗಾಗಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆರೋಗ್ಯ ಸೌಧ, 5ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, ಬೆಂಗಳೂರು-560023 ಈ ವಿಳಾಸಕ್ಕೆ ಮುದ್ದಾಂ ಸಲ್ಲಿಸಲು ಸೂಚಿಸಿದೆ. ಹಾಗೂ ಅನುಬಂಧ-3ರಲ್ಲಿ ಹೆಸರಿಸಿರುವ ಬಿಡಿಎಸ್ ವೈದ್ಯರು ಮತ್ತು ಎಂಡಿಎಸ್ ಪದವಿ ಹೊಂದಿರುವ ಕಿರಿಯ ದಂತ ಆರೋಗ್ಯಾಧಿಕಾರಿಗಳು ಸಹ ಅನುಬಂಧ-2ರ ನಮೂನೆಯನ್ನು ಭರ್ತಿ ಮಾಡಿ ಮೇಲಾಧಿಕಾರಿಗಳ ಮೇಲು ರುಜುವಿನೊಂದಿಗೆ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ.

27.6.22

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**ಇವರಿಗೆ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆ.ಕು.ಕ ಇಲಾಖೆ, ವಿಕಾಸ ಸೌಧ, ಬೆಂಗಳೂರು
2) ಎಲ್ಲಾ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರು,
3) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
4) ಎಲ್ಲಾ ವೈದ್ಯಕೀಯ ಕಾಲೇಜುಗಳ ಡೀನ್ & ಡೈರೆಕ್ಟರ್‌ಗಳಿಗೆ
5) ವೈದ್ಯಕೀಯ ಅಧೀಕ್ಷಕರು, ಕೆ.ಸಿ.ಜನರಲ್ ಆಸ್ಪತ್ರೆ, ಮಲ್ಲೇಶ್ವರಂ/ಸಾರ್ವಜನಿಕ ಆಸ್ಪತ್ರೆ, ಜಯನಗರ/ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು

## ಅನುಬಂಧ-1

## ಆಕುಕ ಸೇವೆಗಳ ಇಲಾಖೆಯಲ್ಲಿನ ಜಿಲ್ಲಾ ಆಸ್ಪತ್ರೆಗಳಲ್ಲಿ ಖಾಲಿ ಇರುವ (ಕಾರ್ಯನಿರತ ಬಿಡಿಎಸ್ ವೈದ್ಯರ ಹುದ್ದೆಗಳನ್ನು ಖಾಲಿ ಎಂದು ಪರಿಗಣಿಸಿ) ದಂತ ಆರೋಗ್ಯಾಧಿಕಾರಿ ಹುದ್ದೆಗಳ ವಿವರಗಳು

| ಕ್ರ. ಸಂ | ಜಿಲ್ಲೆಗಳ ಹೆಸರು | ಖಾಲಿ ಹುದ್ದೆ |
|---|---|---|
| 1 | ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ ಕೋಲಾರ | 0 |
| 2 | ಜಿಲ್ಲಾ ಆಸ್ಪತ್ರೆ ಮಡಿಕೇರಿ | 2 |
| 3 | ಜಿಲ್ಲಾ ಆಸ್ಪತ್ರೆ ಕಾರವಾರ (ಉ.ಕ) | 2 |
| 4 | ಜಿಲ್ಲಾ ಆಸ್ಪತ್ರೆ ಯಾದಗಿರಿ | 2 |
| 5 | ಜಿಲ್ಲಾ ಆಸ್ಪತ್ರೆ ಕೊಪ್ಪಳ | 2 |
| 6 | ಜಿಲ್ಲಾ ಆಸ್ಪತ್ರೆ ಚಿಕ್ಕಮಗಳೂರು | 1 |
| 7 | ಜಿಲ್ಲಾ ಆಸ್ಪತ್ರೆ ತುಮಕೂರು | 1 |
| 8 | ಜಿಲ್ಲಾ ಆಸ್ಪತ್ರೆ ಚಾಮರಾಜನಗರ | 1 |
| 9 | ಜಿಲ್ಲಾ ಆಸ್ಪತ್ರೆ. ಕಲಬುರ್ಗಿ | 1 |
| 10 | ಸರ್ ಸಿ.ವಿ. ರಾಮನ್ ಬೆಂಗಳೂರು | 0 |
| 11 | ಜಿಲ್ಲಾ ಆಸ್ಪತ್ರೆ, ರಾಮನಗರ ಜಿಲ್ಲೆ | 0 |
| 12 | ಜಿಲ್ಲಾ ಆಸ್ಪತ್ರೆ ಚಿತ್ರದುರ್ಗ | 2 |
| 13 | ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಮಂಗಳೂರು | 1 |
| 14 | ಜಿಲ್ಲಾ ಆಸ್ಪತ್ರೆ ಗದಗ | 1 |
| 15 | ಜಿಲ್ಲಾ ಆಸ್ಪತ್ರೆ ಧಾರವಾಡ | 1 |
| 16 | ಜಿಲ್ಲಾ ಆಸ್ಪತ್ರೆ ಬಾಗಲಕೋಟೆ | 1 |
| ಒಟ್ಟು ಖಾಲಿ ಇರುವ ಹುದ್ದೆಗಳು | | **18** |

ಮುಖ್ಯ ಆಡಳಿತಾಧಿಕಾರಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.

| ಅನುಬಂಧ-2 | | |
|---|---|---|
| 1 | ಎಂಡಿಎಸ್ ತಜ್ಞತೆ/ ಬಿಡಿಎಸ್ ದಂತ ಆರೋಗ್ಯಾಧಿಕಾರಿಗಳ ಹೆಸರು | |
| 2 | ಪದನಾಮ | |
| 3 | ಕಾರ್ಯನಿರ್ವಹಿಸುತ್ತಿರುವ ಸ್ಥಳ | |
| 4 | ಹುಟ್ಟಿದ ದಿನಾಂಕ | |
| 5 | ಸೇವೆಗೆ ಸೇರಿದ ದಿನಾಂಕ | |
| 6 | ಎಂಡಿಎಸ್ ವ್ಯಾಸಂಗ ಪೂರೈಸಿದ ದಿನಾಂಕ | |
| 7 | ಪ್ರಸ್ತುತ ಸ್ಥಳದಲ್ಲಿ ಕಾರ್ಯ ನಿರತ ದಿನಾಂಕ | |
| 8 | ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವ ಆದೇಶ ಸಂಖ್ಯೆ ಮತ್ತು ದಿನಾಂಕ | |
| 9 | ಷರಾ | |

ದಂತ ಆರೋಗ್ಯಾಧಿಕಾರಿಗಳ ಸಹಿ

ನಿಯಂತ್ರಣಾಧಿಕಾರಿಗಳ ಸಹಿ

## ಅನುಬಂಧ-3

## ಆಕುಕ ಸೇವೆಗಳ ಇಲಾಖೆಯಲ್ಲಿನ ಜಿಲ್ಲಾ ಆಸ್ಪತ್ರೆಗಳಲ್ಲಿ ಕಾರ್ಯನಿರತ ಬಿಡಿಎಸ್/ಎಂಡಿಎಸ್ ಪದವಿ ಹೊಂದಿರುವ ಕಿರಿಯ ದಂತ ಆರೋಗ್ಯಾಧಿಕಾರಿಗಳ ಪಟ್ಟಿ

| ಕ್ರ. ಸಂ | ಜಿಲ್ಲೆಗಳ ಹೆಸರು | ಬಿಡಿಎಸ್ ವೈದ್ಯರು |
|---|---|---|
| 1 | ಜಿಲ್ಲಾ ಆಸ್ಪತ್ರೆ ಮಡಿಕೇರಿ | 1. ಡಾ॥ ಮನ್‌ಪ್ರೀತ್ ಕೌರ್-18.12.2015 (ಎಮ್‌ಡಿಎಸ್) |
| 2 | ಜಿಲ್ಲಾ ಆಸ್ಪತ್ರೆ ತುಮಕೂರು | ಡಾ॥ ಸಂಧ್ಯ (ಎಮ್‌ಡಿಎಸ್) (6ವರ್ಷ ಒಳಗಿನ) |
| 3 | ಜಿಲ್ಲಾ ಆಸ್ಪತ್ರೆ ಚಾಮರಾಜನಗರ | ಡಾ॥ ಅಮೀತ್ ಜೆ. ಕುರ್ತುಕೋಟಿ (ಎಮ್‌ಡಿಎಸ್) (6ವರ್ಷ ಒಳಗಿನ) |
| 4 | ಜಿಲ್ಲಾ ಆಸ್ಪತ್ರೆ. ಕಲಬುರ್ಗಿ | ಡಾ॥ ವಿಜೇತ ಜಾದವ್ (ಎಮ್‌ಡಿಎಸ್) (6ವರ್ಷ ಒಳಗಿನ) |
| 5 | ಜಿಲ್ಲಾ ಆಸ್ಪತ್ರೆ ಚಿತ್ರದುರ್ಗ | 1<br>ಡಾ॥ ಜಿ.ಆರ್. ಸುಧಾ |
| 6 | ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಮಂಗಳೂರು | 1<br>ಡಾ॥ ಲವೀನ ಜೆ. ನರ್ಹೋನ |
| 7 | ಜಿಲ್ಲಾ ಆಸ್ಪತ್ರೆ ಗದಗ | 1<br>ಡಾ॥ ಮಲ್ಲಿಕಾರ್ಜುನ್ ಕುಂಬಾರ್ |
| 8 | ಜಿಲ್ಲಾ ಆಸ್ಪತ್ರೆ ಧಾರವಾಡ | 1<br>ಡಾ॥ ನಾಗರತ್ನ ಟಿ. ಪೂಜಾರ್ |
| 9 | ಜಿಲ್ಲಾ ಆಸ್ಪತ್ರೆ ಬಾಗಲಕೋಟೆ | 1<br>ಡಾ॥ ಸಾವಿತ್ರಿ ಸಜ್ಜನವರ್ ಎಸ್. |

ಮುಖ್ಯ ಆಡಳಿತಾಧಿಕಾರಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.